ಟೈಮ್ಸ್ ಆಫ್ ಕರ್ನಾಟಕ

ನಾಡಿನ ಹೆಮ್ಮೆ · ಕನ್ನಡ ದಿನಪತ್ರಿಕೆ

**Sunday 04th August 2024**

# 14th Graduation Day Ceremony by RVCE

### ಆರ್.ವಿ.ಸಿ.ಇ ಕಾಲೇಜು ವತಿಯಿಂದ 14ನೇ ಪದವಿ ದಿನ ಸಮಾರಂಭ

## ಪದವಿ ಪಡೆಯಲು ಮೌಲ್ಯಯುತ ಶಿಕ್ಷಣ, ಪರಿಶ್ರಮ ಅಗತ್ಯ: ಎಂ.ಆರ್.ಜೈಶಂಕರ್




**ಕೆಂಗೇರಿ:** ದೇಶ ಅಭಿವೃದ್ಧಿ ಪಥದತ್ತ ಸಾಗಲು ತಾಂತ್ರಿಕ ಹಾಗೂ ವೈಜ್ಞಾನಿಕ ವಿಭಿನ್ನವಾದ ಆವಿಷ್ಕಾರಗಳನ್ನು ಪ್ರಸ್ತುತಪಡಿಸುವಲ್ಲಿ ಎಂಜಿನಿಯರ್‌ಗಳ ಪಾತ್ರ ಮಹತ್ವದಾಗಿದೆ ಎಂದು ಬ್ರಿಗೇಡ್ ಗ್ರೂಪ್‌ನ ಕಾರ್ಯಾಧ್ಯಕ್ಷ ಎಂ.ಆರ್. ಜೈಶಂಕರ್ ಹೇಳಿದರು.

ಬೆಂಗಳೂರು–ಮೈಸೂರು ಮುಖ್ಯರಸ್ತೆ ಸಮೀಪದ ಪೂರ್ಣಿಮಾ ಪ್ಯಾಲೇಸ್ ಸಭಾಂಗಣದಲ್ಲಿ ಆರ್.ವಿ.ಸಿ.ಇ ಕಾಲೇಜು ಆಯೋಜಿಸಿದ್ದ 14ನೇ ಪದವಿ ದಿನ ಸಮಾರಂಭದಲ್ಲಿ ಮಾತನಾಡಿದ ಅವರು, ಪದವಿ ಗಳಿಕೆಯ ಹಿಂದೆ ನಿಮ್ಮ ಪರಿಶ್ರಮ, ತಂದೆ, ತಾಯಿ ಬೆಂಬಲ, ಗುರುಗಳು ನೀಡಿದ ಮೌಲ್ಯಯುತ ಶಿಕ್ಷಣ ಕಾರಣವಾಗಿದೆ ಎಂದರು.

ಇಂದಿನ ಯುವ ಪೀಳಿಗೆ ಎದುರಿಸಬೇಕಾಗಿರುವುದು ಪ್ರಾದೇಶಿಕ ಸವಾಲುಗಳಲ್ಲ, ಬದಲಾಗಿ ಜಾಗತಿಕ ಸವಾಲು. ಸಾಧನೆಗೆ ಅನೇಕ ಅವಕಾಶಗಳು ನಮ್ಮ ದೇಶದಲ್ಲಿದೆ, ಅದನ್ನು ಬಳಸಿಕೊಳ್ಳುವ ಮನೋಭಾವ ಹೊಂದಬೇಕು. ಅನಗತ್ಯ ವಿಷಯದ ಬಗ್ಗೆ ಹೆಚ್ಚು ಗಮನ ಹರಿಸದೆ ಶ್ರಮವಹಿಸಿ ದುಡಿದರೆ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯಬಹುದು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟಿನ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಸಮಾಜದಿಂದ ಉಪಕೃತರಾದ ನಾವು ಸಮಾಜಕ್ಕೆ ನಮ್ಮಿಂದಾದ ಸೇವೆ ಸಲ್ಲಿಸದೇ ಹೋದರೆ ನಮ್ಮ ವ್ಯಕ್ತಿತ್ವಕ್ಕೆ ಘನತೆಯಿರುವುದಿಲ್ಲ, ವಿದ್ಯಾಭ್ಯಾಸ ಪಡೆದ ಸಂಸ್ಥೆ ಬಗ್ಗೆ ಉತ್ತಮ ವಿಷಯ ಪಸರಿಸಿ ಸಂಸ್ಥೆಯ ಉನ್ನತಿಗೆ ಸಹಕಾರ ನೀಡಬೇಕೆಂದರು.

14ನೇ ಪದವಿ ಪ್ರಧಾನ ಸಮಾರಂಭದಲ್ಲಿ 12 ಚಿನ್ನದ ಪದಕಗಳು, 12 ಬೆಳ್ಳಿ ಪದಕಗಳು, 18 ಬಿಇ ಪದವಿಧರರಿಗೆ ಗೌರವ ಸಮರ್ಪಣೆ ಸೇರಿದಂತೆ ಒಟ್ಟು 1,140 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಹ್ಮಣ್ಯ ಸ್ವಾಗತ ಭಾಷಣ ಮಾಡಿದರು. ಉಪ ಪ್ರಾಂಶುಪಾಲೆ ಡಾ.ಕೆ.ಎಸ್.ಗೀತಾ ವಂದನಾರ್ಪಣೆ ಸಲ್ಲಿಸಿದರು. ಡಾ.ಎ.ಸಿ.ಚಂದ್ರಶೇಖರರಾಜು, ಡಾ.ಎವಿಎಸ್ ಮೂರ್ತಿ, ಡಿ.ಪಿ.ನಾಗರಾಜ್, ಪಿ.ಎಸ್.ವೆಂಕಟೇಶ್, ಎ.ನಿಖಿಲ್, ಕಾಲೇಜಿನ ಆಡಳಿತ ಮಂಡಳಿ ಸದಸ್ಯರು, ಭೋದಕರು, ಸಿಬ್ಬಂದಿ ವರ್ಗ, ಇತರರು ಉಪಸ್ಥಿತರಿದ್ದರು.